# ಚಿತ್ತ ಶುದ್ಧಿಯಿಲ್ಲದ ಮನುಜ ಜ್ಞಾನಿಯೇ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
4. **Note:** Lyrics mentioned without highlights are as per Ref. 2. The wordings in Ref. 2, given in yellow highlights, are slightly different. The wordings in Ref. 3 are almost similar (with small differences) to Ref. 2 and these differences are not considered here.
5. **Note:** Singer has followed the lyrics as in Ref. 2.
6. **Note:** The Ankita is different in these books. We have considered Ref.2 as standard and taken that Ankita for listing.

| | |
|---|---|
| ರಾಗ: ಮುಖಾರಿ ತಾಳ: ಝಂಪೆ | ರಾಗ: ಮುಖಾರಿ ತಾಳ: ಝಂಪೆ |
| ಚಿತ್ತ ಶುದ್ಧಿಯಿಲ್ಲದ ಮನುಜ ಜ್ಞಾನಿಯೇ ‖ ಪ ‖ | ಚಿತ್ತ ಶುದ್ಧಿಯಿಲ್ಲದವನವ ಜ್ಞಾನಿಯೆ, ಪುಣ್ಯ |
| ಪಾಪ ಹೊತ್ತು ಕಳೆಯದಂಥ ನರ ಮನುಜನೆ ‖ ಅಪ ‖ | ಪಾತಕಗಳನರಿಯದವ ಮನುಜನೆ ಕೃಷ್ಣ |
| ಬಂಧನದೊಳಿಹ ವ್ಯಾಘ್ರ ಅದು ಬಹು ತಪಸ್ವಿಯೇ | ಮಾರಿ ಮನೆಯೊಳಗಿರಲು ಸಹಕಾರಿಯೆನಬಹುದೆ ? |
| ಸಿಂಧುವಿನೊಳಿಹ ನೊರೆ ಸಿತಕಿರಣವೇ | ಊರೊಳಗಿನಾ ಕಳ್ಳ ಅವ ಸುಜನನೆ ? |
| ಅಂಧಕನು ಕಣ್ಣು ಮುಚ್ಚಲು ಯೋಗ ಸಾಧನವೇ | ಜಾರತನವೆಸಗುವಳು ಕುಲವನಿತೆಯಹುದೆ, ಸಂ- |
| ಮಂದಮತಿ ಸುಮ್ಮನಿರಲದು ಮೌನವೆ ‖ 1 ‖ | ಸಾರದೆಚ್ಚರವಿಲ್ಲದವ ಸುಗುಣನೆ ? |
| ಶ್ವಾನ ಬೂದಿಯೊಳಿರಲು ಶಿವ ಭಕ್ತನೆನಬಹುದೆ | ಶ್ವಾನ ಬೂದಿಯಲಿರಲು ಶಿವ ಭಕ್ತನನೆಬಹುದೆ ? |
| ಕಾನನದೊಳಿಹ ಕಾಗೆ ವನವಾಸಿಯೇ | ಕಾನನದೊಳಿಹ ಕಾಗೆ ವನವಾಸಿಯೇ ? |
| ಗಾಣ ತಿರುಗಲೆತ್ತು ದೇಶ ಯಾತ್ರೆಯೆನ ಬಹುದೆ | ಗಾಣ ತಿರುಗುವ ಎತ್ತಿಗದು ಪ್ರದಕ್ಷಣೆಯೆ, ಬಕ |
| ಮೀನದಾಸೆಯ ಬಕನ ಸ್ಥಿತಿ ಧ್ಯಾನವೇ ‖ 2 ‖ | ಧ್ಯಾನವನು ಮಾಡಲದು ಮೌನವೇ ಕೃಷ್ಣಾ? |
| ತೋಳ ಅಡವಿಯ ತಿರುಗಲು ಅದು ದಿಗಂಬರನೆ | ತೋಳ ಅಡವಿಯಲಿರಲು ಅದು ದಿಗಂಬರನಹುದೆ ? |
| ಗಾಳಿಯುಂಬುವ ಭುಜಗ ಉಪವಾಸಿಯೇ | ಗಾಳಿಯಂಬುವ ಉರುಗ ಉಪವಾಸಿಯೇ ? |
| ಆಲದ ಮರಕೆ ಜಡೆಯಿರಲು ಅದು ತಪಸ್ವಿಯೆ | ಆಲವದು ಜಡೆಬಿಡಲು ಪರಮ ಋಷಿಯಹುದೆ, ಬಲು |
| ಕಾಲದಲ್ಲಿಹ ಗೂಗೆ ಹಿರಿಯಾಗಬಹುದೆ ‖ 3 ‖ | ಕಾಲ ಬಾಳಿದ ಹದ್ದು ತಾ ಹಿರಿಯದೆ ? |

ಮಾರಿ ಮನೆಯೊಳಗಿರಲು ಮತ್ತೆ ಸಹಕಾರಿಯೇ
ಊರ ಒಳಗಿನ ಕಳ್ಳ ಅವ ನೆಂಟನೇ
ಜಾರೆಯೆನಿಸುವಳು ಕುಲವನಿತೆಯೇ ಸಂ-
ಸಾರದೊಳು ಮಗ್ನನಾದವ ಜ್ಞಾನಿಯೇ || 4 ||

ಬಂಧನದೊಳಿಹ ವ್ಯಾಘ್ರವನು ತಪಸಿಯೆನಬಹುದೆ ?
ಸಿಂಧುಜವು ಎನೆ ವಿಷವು ಶೀತಕರನೆ ?
ಅಂಧಕನು ಕಣ್ಮುಚ್ಚಲದು ಧ್ಯಾನವೇ, ಗಜವು
ಮಂದಗತಿಯಾದರದು ಸೈರಣೆಯೆ ಕೃಷ್ಣಾ?

ಮಂಡೂಕ ಕೂಗಲದು ಮಂತ್ರವೆಂದೆನಬಹುದೆ
ಗುಂಡು ನೀರೊಳಗಿರಲು ಅದು ಸ್ನಾನವೇ
ಪುಂಡರೀಕಾಕ್ಷ ಸಿರಿ ಪುರಂದರ ವಿಠಲನ್ನ
ಕಂಡು ಭಜಿಸದವ ಪಾಪಿ ಅವ ಮನುಜನೇ || 5 ||

ಮಂಡೂಕ ಗಂಟಲನು ಮೀಟಲದು ಮಂತ್ರವೆ ?
ಗುಂಡು ನೀರಲಿ ಮುಳುಗಲದು ಸ್ನಾನವೇ ?
ಪುಂಡರೀಕಾಕ್ಷ ಶ್ರೀ ಪುರಂದರ ವಿಠಲನ
ತೊಂಡನಾಗದ ನರನ ಬಾಳು ಬಾಳುವೆಯೆ ?

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹೊರ ವೇಷಗಳಿಂದ ಮಾನವನು ಸುಜನನೂ, ಗೌರವಶಾಲಿಯೂ, ಜ್ಞಾನಿಯೂ ಎನಿಸಿಕೊಳ್ಳಲಾರ.

**ವನವಾಸಿ** = ವನದಲ್ಲಿರುವ ತಪಸ್ವಿ

**ಸಿಂಧುಜ** = ಹಾಲಾಹಲ (ವಿಷವು ಸಮುದ್ರದಲ್ಲಿ ಹುಟ್ಟಿತು)

**ಶೀತಕರ** = ಚಂದ್ರ, ಶೈತ್ಯಕಾರಕ

**Classification:** Keerthane
**Ankita:** siri purandara vittala
**Location:** NA
**Category:** Loka Neeti
**Sub-Category:** chitta, jnana, punya, nara, Krishna, mane, ooru, kalla, hengasu, nayi, shiva, kaadu, kage, govu, dhyAna, pradakshine, uraga, upavasa, visha, gaja, kappe, mantra, snana, baduku, explanation
**Pravachana:** NA
**Explanation:** nAda nIrAja nadim dAsa surabhi